೧೯೭೫    ೧೯೮೫ ನಡುವಿನದ್ದು

ಕಾಮತ್ – ಈ ಶರೀರದಲ್ಲಿದ್ದ ಜೀವಾತ್ಮನು ಒಮ್ಮೆ ಹೊರಗೆ ಹೋಗಿ ಆ ಆತ್ಮ ಈ ಶರೀರವನ್ನು ನೋಡಿ ಈ ಶರೀರ ಬೇರೆ, ಆತ್ಮ ಬೇರೆ ಅಂತ ಆ ಸಿದ್ಧಾಂತಕ್ಕೆ ಬಂದ ಕಾರಣದಿಂದ ಈಗ ಈ ಶರೀರದಲ್ಲಿರುವ ಆತ್ಮ ನಾನಂತ ಅಷ್ಟೇ ಹೇಳಬಹುದೇ ಹೊರತು, ಈ ಶರೀರಕ್ಕೂ ನನಗೂ ಸಂಬಂಧ ಇಲ್ಲ ಅಂತ ಹೇಳ್ತೀರಿ, ಗೊತ್ತಾಯ್ತಲ್ವೋ ? ಹಾಗಿರುವಾಗ ಒಂದು ಪ್ರಶ್ನೆ ಬರ್ತದೆ. ಆ ಹೊರಗೆ ಹೋದ ಆತ್ಮವು ಈ ಶರೀರದಲ್ಲಿದ್ದದ್ದೇಯೋ, ಬೇರೆ ಬಂದದ್ದೋ. ಹಾಗಿದ್ರೆ ಮೊದಲಿದ್ದದ್ದೇ ಅಂತ ಆದ್ರೆ ಬರೀ ನೆಪ ಮಾತ್ರಕ್ಕೆ ಆ ಹೆಸರಿದ್ರೆ ಅದರಲ್ಲೂ ದೋಷ ಏನುಂಟು. ಆಗ ಒಂದು ವಿಚಾರವನ್ನು ಸರಿಯಾಗಿ ಕೊಡಬೇಕಾಕ್ತದೆ. ಯಾವುದು, ಆತ್ಮ ಸಾಕ್ಷಾತ್ಕಾರ ಆದ ಕಾರಣದಿಂದ ಶರೀರಕ್ಕೂ ಆತ್ಮಕ್ಕೂ ಸಂಬಂಧ ಇಲ್ಲ.

ಅಜ್ಜ – ಇದೆಲ್ಲಾ ಪಾಯಿಂಟ್‌ಗಳು ಹೊಡೆದು ಹೋಕ್ತದೆ. ಏನೂಂತ ಕೇಳಿದ್ರೆ ಫೌಂಡೇಷನ್ನಿನ ವಿಚಾರದಲ್ಲಿ, ಇಲ್ಲಿಂದ ಮಾತುಗಳು ಬರ್ತದೆ. ಅದಕ್ಕೆ ಪ್ರಶ್ನೆ ಕೇಳೋದು ಎಲ್ಲವೂ ಸಮಸ್ಯೆಯಾಗಿ ನಿಲ್ಲುವಂಥಾದ್ದು ಇಲ್ಲಿ. ವಾಪಸು ಪ್ರಶ್ನೆಗೆ ಇಲ್ಲಿ ಎಡೆ ಕೊಡೋದಿಲ್ಲ. ನೀವು ಕೇಳುವಂಥಾ ಆ ಪ್ರಶ್ನೆಗಳಿಗೆ ಬೇಕಾದ ಉತ್ತರವೇ ಬರುವಂಥಾದ್ದು – ಇಲ್ಲಿಂದ. ಪ್ರಶ್ನೆ ಕೇಳುವಂಥಾದ್ದು ಇಲ್ಲಿ ಇಲ್ಲ. ಇಲ್ಲಿ ಸಮಸ್ಯೆ ಹಾಗೆ ಉಂಟು. ಇಲ್ಲಿ ಪ್ರಶ್ನೆ ಬೇಡ. ಮುಖ್ಯ ಈಗ ಮುಂದಿನ ವಿಚಾರ ಕೇಳೋದು ಯಾವುದು. ಇಲ್ಲಿ ಯಾವ ಪ್ರಶ್ನೆಗಳೂ ಬೇಡ.

ಕಾಮತ್ – ಈ ವಿಚಾರಕ್ಕೆ ಯಾವ ರೀತಿ ಬರ್ತದೆ.

ಅಜ್ಜ – ಈ ಉತ್ತರಗಳು ಬರ್ತದಲ್ಲ. ಇಲ್ಲಿಂದ ಅದು. ಅಲ್ಲಿ ಪ್ರಶ್ನೆ ಉಂಟು ಅಂತ್ಹೇಳಿಯೇ ಲೆಕ್ಕ. ಉತ್ತರ ಮಾತ್ರ ಪ್ರಶ್ನೆ ಕೇಳೋದೇ ಬೇಡ. ಹೀಗಿದ್ದ ಸಮಸ್ಯೆ ಇಲ್ಲಿರುವಂಥಾದ್ದು. ಇಲ್ಲಿಯ ಸಮಸ್ಯೆ ಅಷ್ಟೆ.

ಕಾಮತ್ – ಅಲ್ಲ. ಇದೀಗ ಕರೆಕ್ಟ್ ಆದ್ರೆ ಅಲ್ಲಿಗೆ ಸಮಸ್ಯೆ ಮುಗೀತಲ್ಲ.

ಅಜ್ಜ – ಯಾವುದು ಕರೆಕ್ಟ್ ಆದ್ರೆ.

ಕಾಮತ್ – ಯಾಕೆ ಬೇಕಾಗಿ ಈ ಶರೀರಕ್ಕೆ ಆ ಹೆಸರು ಅನ್ವಯಿಸೋದಿಲ್ಲ.

ಅಜ್ಜ – ಇಲ್ಲಿ ಫೌಂಡೇಷನ್ನಿನಲ್ಲಿ ಬರ್ತದೆ ನೋಡಿ. ಫೌಂಡೇಷನ್ ಬರುವಾಗ ಇದೀಗ ನೀವು ಕೇಳಿದ ಪ್ರಶ್ನೆ ಉಂಟಲ್ಲಾ, ಅದೆಲ್ಲಾ ಸಂಕ್ಷಿಪ್ತ. ಜೀವನ ವೃತ್ತಾಂತ – – ಅಂತ ಬರ್ತದಲ್ಲಾ, ಬದುಕಿದೆ. ಅದು ನಿಮ್ಮಲ್ಲಿಲ್ಲ ಅಲ್ವಾ.

ಕಾಮತ್ – ಇಲ್ಲ.

ಅಜ್ಜ – ಅದರಲ್ಲಿ ಹಾಕಿದೆ ನಾವು. ಅದು ಗೊತ್ತುಂಟು. ನಮಗೆ ಮುಂದೆ ಅದು ಬೇಕಾಕ್ತದೆ ಅಂತ್ಹೇಳಿ ನಮಗೆ ಗೊತ್ತುಂಟದು. ಈಗಾಗೀವಾಗ ಕೊಡ್ಲಿಕ್ಕೆ ಅಂದ್ರೆ ಇನ್ಮೇಲೆ ಹ್ಯಾಗೇ ಅಂತ ಕೇಳಿದ್ರೆ. ಮೇನ್ ಇದು ಮಾತ್ರ ಕೊಡ್ತದೆ. ನೋಡಿ ಇಲ್ಲಿ. – – – – – ನೀವು ಮೂರು ಗಂಟೆಗೆ ಒಂದೈದು ನಿಮಿಷ ಅಲ್ಲಿಗೆ ಬನ್ನಿ. ನಾಲ್ಕುಗಂಟೆಗೆ ಇತ್ತ ಬರ್ಬಹುದು.

ಕಾಮತ್ – ಆಯ್ತು.

ಅಜ್ಜ – ಈಗಿನ ಸಮಸ್ಯೆ ವಿಚಾರಗಳನ್ನು ಸ್ಪಷ್ಟ ನೋಡಲಿಕ್ಕುಂಟು. ಸಮಸ್ಯೆಗಳನ್ನು ಮಾತ್ರ. ಆತ್ಮನು ವಿಕಾಸ ಹೊಂದುವುದಿಲ್ಲ ಎಂಬ ಸಿದ್ಧಾಂತದಲ್ಲಿ ನೋಡ್ಲಿಕ್ಕುಂಟು. ಹಾಗಾದ್ರೆ ವಿಕಾಸ ಹೊಂದುವಂಥಾದ್ದು ಯಾವುದು.

ಕಾಮತ್ – ದೇಹ ಮಾತ್ರ.

ಅಜ್ಜ – ಊಂ.

ಕಾಮತ್ – ಜೀವಾತ್ಮ ಮಾತ್ರ.

ಅಜ್ಜ – ಹಾಗಾದ್ರೆ ಜೀವಾತ್ಮ ಹೇಗೆ ವಿಕಾಸ ಹೊಂದುವುದು. ಅತ್ತ ಇತ್ತ ಚಲನೆಯಲ್ಲಿ ಬರುವುದು ಹ್ಯಾಗೆ. ಅದಕ್ಕೆ ಯಾವ ಆಧಾರ. ಜೀವಾತ್ಮನಾಗುವಂಥಾದ್ದು ಹ್ಯಾಗೆ. ಅಲ್ಲಿ ಆಮೇಲಿ ಬಾಕಿ ವಿಚಾರ. ಐಕ್ಯತೆ ವಿಚಾರವೂ ಉಂಟು. ಅದು ಬಾಳ ಸುಲಭ. ಸಾಕ್ಷಾತ್ಕಾರದ ವಿಷಯ ಬಾಳ ಕಷ್ಟ. ಅದರಲ್ಲಿ ಇರುವುದು ಮೇನ್ ಪಾಯಿಂಟ್ಸ್ ಸಾಕ್ಷಾತ್ಕಾರದ ವಿಚಾರದಲ್ಲಿ ಮಾತ್ರ ನಮ್ಮದು ಆರ್ಗ್ಯುಮೆಂಟ್ಸ್‌ಗಳು. ಐಕ್ಯತೆಯ ವಿಚಾರ ಹ್ಯಾಗೆ ಅಂತ ಕೇಳಿದ್ರೆ. ನಾವು ಅದನ್ನು ಅಷ್ಟು ಇದು ಮಾಡುವುದಿಲ್ಲ (ಪರಿಗಣಿಸುವುದಿಲ್ಲ). ಅದು ಐಕ್ಯತೆ. ಅದು ಇಲ್ಲಿಂದಿಲ್ಲಿಗೆ. ಇಲ್ಲಿ ಜೀವಾತ್ಮ ಪರಮಾತ್ಮ ಇಲ್ಲಿ ಐಕ್ಯತೆ ಆಗುವಂಥಾದ್ದು. ನೋಡಿ. ಇಲ್ಲಿ ದಿವ್ಯಾತ್ಮ ಆಗಿಬಿಟ್ಟ ಅವನು ಮತ್ತೆ ಆತ್ಮ, ಆತ್ಮ, ಆತ್ಮ ಅಂತ ನಿರಾಕಾರ ಸ್ಥಿತಿ ಬರ್ಬೇಕು. ಇವನು ವಾಪಸು ಇಲ್ಲಿಗೆ ಹೋಗುವುದಿಲ್ಲ. ಆ ದಿವ್ಯಾತ್ಮನು ಪರಮಾತ್ಮನಲ್ಲಿಗೆ ಹೋಗುವುದಿಲ್ಲ. ಎಲ್ಲಿಗೆ ಹೋಕ್ತಾನೆ. ಫೌಂಡೇಷನ್ ಕೆಳಗೆ ಬರ್ತಾನೆ. ಜೀವಾತ್ಮನು ಏನು, ಪರಮಾತ್ಮನಲ್ಲಿ ಐಕ್ಯ ಆಗಲಿಕ್ಕ ಸಾಧ್ಯ ಉಂಟು. ಅವನು ದಿವ್ಯಾತ್ಮನಾಗಿ ಸಂಭವಿಸಿದಾಗ ಅಲ್ಲಿ ನೋಡಿ, ಸಾಕ್ಷಾತ್ಕಾರಕ್ಕೆ ಹೋಗುವಂಥಾದ್ದು. ಆತ್ಮ, ಆತ್ಮ, ಆತ್ಮ ಅಂತ ದೇಹಾತೀತ ಸ್ಥಿತಿ ಬರೋದು ಇಲ್ಲಿ. ಸಾಕ್ಷಾತ್ಕಾರದಲ್ಲಿ ದೇಹಾತೀತ ಸ್ಥಿತಿ ಬರ್ತದೆ. ದೇಹದಲ್ಲಿದ್ದು ಇಲ್ಲದ ಸ್ಥಿತಿ. ಅದಕ್ಕಿಂತ ದೊಡ್ಡ ಕೆಲಸ ಪ್ರಪಂಚದಲ್ಲಿ ಇನ್ನಿಲ್ಲ ಅಂತ ಹೇಳೋದು ಇದು. ಏಕೆ. ಅದು ಮೂರು ಬರ್ಬೇಕು ನೋಡಿ. ಆತ್ಮ, ಆತ್ಮ ಆತ್ಮ ಅಂತ್ಹೇಳಿ ಇಲ್ಲಿ ಮೂರು. ಮಧ್ಯದಲ್ಲಿ ಬೇರೆ ಇದೆ ಒಂದೇ ಆಯ್ತು. ಯಾವುದು ? ಈ ಜೀವಾತ್ಮನು ಇಲ್ಲಿಯೇ ಐಕ್ಯತೆ ಆಯ್ತು. ಪರಮಾತ್ಮನಲ್ಲಿ ಐಕ್ಯ. ಈ ಜೀವಾತ್ಮನು ದಿವ್ಯಾತ್ಮನಾಗಿ ಸಂಭವಿಸಿದಾಗ, ಈಗ ಸಂಭವಿಸುವುದು ಹ್ಯಾಗೆಂತ ಹೇಳಿ ಬರ್ಬೇಕು. ಜೀವಾತ್ಮನು ದಿವ್ಯಾತ್ಮನಾಗೋದು ಹ್ಯಾಗೇಂತ್ಹೇಳಿ. ಬಾಳೇಕಾಯಿ ಹಾಗ್ಲಾಗುವಂಥಾದ್ದು ಇದಕ್ಕೆ ಉದಾಹರಣೆ ಇಟ್ಟಿದ್ದೀರ. ––––– ಮಾಡ್ಲಿಕ್ಕೆ.

ಕಾಮತ್ – ಹಾಂ.

ಅಜ್ಜ – ಹ ಹ ಹ – – – ಕರ್ಮದಿಂದ ಆಗಬೇಕು. ಕರ್ಮವು ಕರ್ತವ್ಯವಾಗಿ ಸಂಭವಿಸಿದಾಗ ಇದಾಗಲಿಕ್ಕೆ ಸಾಧ್ಯತೆ ಇದೆ. ಇಲ್ಲವಾದ್ರೆ ಆಗೋದಿಲ್ಲ. ಐಕ್ಯತೆ ಬಹಳ ಸುಲಭದ್ದು. ಅದು ತನ್ನಿಂದ ತಾನೇ ಆಕ್ತದೆ. ಅದರಲ್ಲಿ ದೊಡ್ಡ ಕೆಲಸ ಏನೂ ಇಲ್ಲ. ಅದು ತನ್ನಿಂದ ತಾನೆ ಅದು ಹೋಗೋದಿಲ್ವಾ. ಅದಕ್ಕೆ ಪ್ರಯತ್ನ ಉಂಟಾ, ಸಾಧನೆ ಉಂಟಾ, ಏನಿಲ್ಲ. ತನ್ನಿಂದ ತಾನೆ ಆಗಿ ಬಿಡ್ತದೆ. ಐಕ್ಯತೆ ವಿಚಾರದಲ್ಲಿ ಐಕ್ಯತೆ ಯಾವಾಗಾದ್ರೂ ಒಂದು ದಿನ ಆಕ್ತದೆ. ಆಂ. ಅಂತ್ಯ ಕಾಲದಲ್ಲಾದ್ರೂ ಹೋಗಿ ಐಕ್ಯ ಆಗ್ಬೇಕು. ಆಂ. ಸಾಕ್ಷಾತ್ಕಾರದಲ್ಲಿ ಹಾಗಲ್ಲ. ಪ್ರಾಮುಖ್ಯವಾದ್ದು ಇದು. ಸಾಕ್ಷಾತ್ಕಾರ.

ಕಾಮತ್ – ಸಾಕ್ಷಾತ್ಕಾರದ ವಿಚಾರ ಸ್ವಲ್ಪ ಹೇಳಿ.

ಅಜ್ಜ – ಅದು ಹೇಳಲಿಕ್ಕೆ ಈ ಸ್ಥಳ ಅಷ್ಟು ಸರಿ ಆಗೋದಿಲ್ಲ. ಇಲ್ಲಿಂದ ಮಾತು ಬರೋದಿಲ್ಲ. ಅದರಲ್ಲಿ ಹೇಳಲಿಕ್ಕೆ ಇರೋದು ಕಮ್ಮಿ. ತಿಳಕೊಳ್ಳುವಂಥಾದ್ದು ಜಾಸ್ತಿ. ಸಾಕ್ಷಾತ್ಕಾರದಲ್ಲಿ ತಿಳಕೊಳ್ಳುವಂಥಾದ್ದು ಜಾಸ್ತಿ. ಸಂಪೂರ್ಣ ಅವನ ಫೌಂಡೇಷನ್ನಲ್ಲೇ ಎಲ್ಲ ಬರ್ಬೇಕು. ಎಲ್ಲ ಕೂಲಂಕುಷ ವಿಮರ್ಶೆ ಮಾಡಿ ಅದನ್ನು ಸಮಜೋಡಣೆ ಮಾಡುವಂಥಾದ್ದು ಅದರಲ್ಲಿ ಸಿಕ್ತದೆ ಎಲ್ಲ. ಒಂದು ಲೆಕ್ಕದಲ್ಲಿ – – – ನಾವು ಹೇಳುವ ವಿಚಾರವೇ ಬೇರೆ. ಪೇಜಾವರ ಸ್ವಾಮಿಗಳ ಹತ್ರ ಇಂಥಾ ಪ್ರಶ್ನೆಗಳನ್ನೆಲ್ಲ ಕೇಳಿ ಯಾವುದಕ್ಕೂ ಉತ್ತರ ಹೇಳಬೇಡಿ. ಅವರ ಉತ್ತರವನ್ನು ತನ್ನಿ. ನಮ್ಮದು ಉತ್ತರ ಆಮೇಲೆ ಕೇಳಿ. ನಾವು ಆಮೇಲೆ ಹೇಳೋದು ನಾವು ಆಗ ಹೇಳೋದು. ಆಖೇರಿ ಉತ್ತರ ನಮ್ಮದು. ನಿಮಗೋಸ್ಕರ ಹೇಳೋದಲ್ಲ. ನಮ್ಮದು ಹಾಗೆ. ಆಯತ್ರಿ. ಬದಲಾವಣೆ ಮಾಡಬೇಕಲ್ರೀ ಅಂತ್ಹೇಳಿ.

ಕಾಮತ್ – ಕರೆಂಟು, ಮೋಟಾರ್, ಎಲ್ಲ ಅದೇ.

ಅಜ್ಜ – ಅದೇ ಯಂತ್ರ ಬದಲಾವಣೆ.

ಕಾಮತ್ – ಯಾಕೇಂದ್ರೆ.

ಅಜ್ಜ – ಈಗ ನೀವು ಕೇಳಿದ ಪ್ರಶ್ನೆ. ನೋಡಿ ಇದೆಲ್ಲ ಬರೆಯುವಂಥಾದ್ದು. ನೀವು ಈಗ ಬರೆಯೋದು ಬೇಡ. ಈಗ ಎಲ್ಲಾ ಕಡೆಯಲ್ಲಿ ಇರೋದೇ ಇಲ್ಲಿಯೂ ಇರೋದೂಂತ್ಹೇಳಿ ಆಗುವಾಗ ಯಾಕೆ ನಮಗದು ಗೊತ್ತಾಗೋದಿಲ್ಲ ಎಂಬುದಕ್ಕೆ ಇಲ್ಲಿ ಹೇಳ್ತದೆ. ಮೋಟಾರು ಮತ್ತು ಕರೆಂಟು ಒಂದೇ ಚೇಂಜ್ ಮಾಡಬೇಕು. ಯಾವುದನ್ನು ?

ಕಾಮತ್ – ಯಂತ್ರವನ್ನು.

ಅಜ್ಜ – ಆ ಯಂತ್ರವನ್ನು ಚೇಂಜ್ ಮಾಡ್ಬೇಕು. ನೀರೆಳಿತ್ತಾ ಉಂಟು. ಅದಕ್ಕೆ ಬೇರೆ ಒಂದು ಯಂತ್ರವನ್ನು ಗೋಡೆಗೆ ಮಾಡಿದ್ರೆ ಅಲ್ಲಿ ನೀರಿನ ಕೆಲಸ ಆಕ್ತದೆ. ಕೆಲಸ ಆಕ್ತದೆ. ಯಾವುದು ನಿಮ್ಮ ಯಂತ್ರಕ್ಕೆ ಸಂಬಂಧ ಪಟ್ಟ ಕೆಲಸ ಉಂಟು, ಅದು ಆಕ್ತದೆ. ಒಂದು ದೇಹದಲ್ಲಿ ನೋಡಿ ಎರಡಾಗ್ಲಿಕ್ಕೆ ಸಾಧ್ಯತೆ ಉಂಟು. ಸಾಕ್ಷಾತ್ಕಾರ, ಐಕ್ಯತೆ ಎರಡೆರಡು. ಜೊತೆಜೊತೆಯಾಗಿ ಬರೋದೂ ಉಂಟು. ಹ. ಹ. ಇದು ಮಾತಾಡಿ ಮುಗಿಯುವಂಥಾದ್ದಲ್ಲ, ಕಾಮತ್ರೆ. ನಿಜವಾಗಿ ಇಂಟರೆಸ್ಟ್ ಇದ್ದವರು ಹ್ಯಾಗೇ ಅಂತ ಕೇಳಿದ್ರೆ ಅವ ಮತ್ತೆ ಅದಕ್ಕೆ ಇಳಿದು ಬಿಡಬೇಕಾಗುತ್ತೆ. ಯಾವುದು ಮತ್ತೆ ೨೪ ಗಂಟೆ ಕೂಡ ಅದುವೇ ಸ್ವಲ್ಪ ಕೂತದ್ದಿದ್ರೆ ವಿಶ್ರಾಂತಿಗೆ ಬಾಕಿ ಯಾವಾಗ್ಲೂ ಅದ್ರಲ್ಲೇ. ಇದ್ದುಬಿಡುವಂಥಾದ್ದು ಹ್ಯಾಗೇಳೋದು ಹಾಗಾಗ್ಲಿಕ್ಕಿಲ್ಲಾಂತ್ಹೇಳಿ ಅದು ಹೇಳ್ಲಿಕ್ಕೆ ಬರೋದಿಲ್ಲ. ಅದಾಗದೆ ಇದಾಗೋದಿಲ್ಲ. ೨೪ ಗಂಟೆಯೂ ಕೂಡ ಆ ವಿಚಾರದಲ್ಲೇ ಇರುವಾಗ ಈ ಮಾತುಗಳು ಆವಾಗ ಈವಾಗ ಯಾವಾಗ ಬರ್ತದೆ ಅಂತ ಹೇಳ್ಲಿಕ್ಕಾಗೋದಿಲ್ಲ. ಬರ್ತಾ ಇರುವಂಥಾದ್ದು ಅಷ್ಟೆ. ಆ ಬರ್ತಾ ಇರುವಾಗ ಹೆಕ್ಕಿ ತಗೀಬೇಕು. ಅರ್ಜುನ ೨೫ ಕಡೆ ಓಡ್ತದೆ ಮನ್ಸು ಅಂತ್ಹೇಳಿ ಹೇಳಿದ್ದು. ಹಾಗಾದ್ರೆ ಅಂತರ್ವಿಚಾರ ಗೊತ್ತಾಗುವಂಥಾದ್ದು ಹೇಗೇಂದ್ರೆ ಅಪ್ಪಾ ಸ್ಥಿತಿ ಹೀಗೇ ಅಂತ್ಹೇಳಿ ಅದು ಬಾಹ್ಯ ವಿಚಾರದಿಂದ. ಅಂದ್ರೆ ಅಲ್ಲಿ ಕರ್ಮ ಕರ್ತವ್ಯ ಆಗ್ಬೇಕು. ಹೀಗೆಲ್ಲಾ ವಿಚಾರಗಳುಂಟು. ನಮಗೆ ನಗೆ ಬರೋದೊಂದೆ. ಇದೇನಪ್ಪ ಪ್ರಪಂಚ, ನಾವು ಹೊಸ ಪ್ರಪಂಚಕ್ಕೆ ಬಂದಿದ್ದೇವೆ ಅಂತ್ಹೇಳಿ ನಮಗೆ ಕಾಣ್ತದೆ. ಆಂ. ಹೊಸ ಪ್ರಪಂಚವಾ ಅಂತ್ಹೇಳಿ ಇದು ಅಲ್ಲಾ.

ಕಾಮತ್ – ಹೊಸದಾಗಿ ಬಂದವರಿಗೆ ಹಾಗೆ ಕಾಣ್ತದೆ ಅದು. ಇದಕ್ಕೆ ಸಂಬಂಧ ಇದ್ದು ಇಲ್ಲ ಅನ್ನುವವರಿಗೆ – – –,

ಅಜ್ಜ – ಹ್ಯಾಕ್, ನಮಗೆ ಏನೂ ಸಂಬಂಧ ಇಲ್ಲ. ಯಥಾರ್ಥಕ್ಕಾದ್ರೂ ಕಾಣೋದು. ಇದೇ ಇಲ್ಲಿ ಸಂಬಂಧ. ಯಾವ ರೂಪದ ಸಂಬಂಧವೂ ಕಾಣೋದಿಲ್ಲ. ಯಾರಿಗೆ ನಮಗೆ, ದೇಹಕ್ಕಲ್ಲ. ದೇಹಕ್ಕೆ ಸಂಬಂಧ ಇರಬಹುದು. ಸುಪ್ತಿ ಪ್ರಶ್ನೆಗೆ ಸಂಬಂಧ ಉಂಟು. ನಮಗೆ ಇಲ್ಲ. ನಮಗೆ ಅಂದ್ರೆ ಯಾರಿಗೆ ಅಂತ್ಹೇಳಿ ಅಂದ್ರೆ ನಾವು ಅಂದರೆ ಅಲ್ಲಿ ಸಂಕೇತ ರೂಪವಾಯಿತು. ವ್ಯಕ್ತಿಯೂ ಅಲ್ಲ, ಶಕ್ತಿಯೂ ಅಲ್ಲ. ಸಂಕೇತ. ಒಂದು ಶಕ್ತಿಯ ಇರುವಿಕೆಯನ್ನು ಸೂಚಿಸುವ ಸಂಕೇತರೂಪವೇ ನಾನು ಅಥವಾ ನಾವು. ನಾವು ಅಂತ್ಹೇಳ್ತದೆ. ಆ ವಸ್ತು ಏಕವಸ್ತು. ಏಕವಸ್ತು ಹೌದು. ಅನೇಕದರಲ್ಲಿ ಇರುವ ಏಕವಸ್ತು. ಅದರಲ್ಲಿ ಎಲ್ಲವೂ ಅಡಗಿ ಉಂಟು. 'ನಾವು' ಅನ್ನೋದು ಎಲ್ಲರಿಗೂ, ಪ್ರತಿಯೊಬ್ಬರಿಗೂ ಅನ್ವಯಿಸ್ತದೆ. ನಾವು ಅಂದ್ರೆ ಒಂದೆ. ಅಂದ್ರೆ ಎಲ್ಲವುಗಳ ಸೇರ್ಪಡೆಯಿಂದ ಒಂದದು. ಇದು ಎಲ್ಲಾ ಕಡೆಯಲ್ಲಿ ಇರುವಂಥಾದ್ದು. ಆ ಯಂತ್ರದ ಉದಾಹರಣೆಯಂತೆ. ಯಂತ್ರ ಎಂಬುದು ದೇಹಕ್ಕೆ ಸಂಬಂಧಪಟ್ಟದ್ದು. ಶುರುವಿನಲ್ಲಿ ಏನೆಲ್ಲಾ ಏನೆಲ್ಲಾ ಅಶೇರಿಗೆ ಹೋಗ್ತ – – – ಯಂತ್ರವನ್ನು ಚೇಂಜ್ ಮಾಡ್ಲಿಕ್ಕೆ ಯಂತ್ರವನ್ನು ಬಿಚ್ಚಬೇಕಪ್ಪ. ಅದಕ್ಕೆ ಫಿಟ್ಟರ್ ಬೇಕು. ಅದಕ್ಕೆ ಏನೆಲ್ಲಾ ಒಂದಕ್ಕೊಂದು ಜೊತೆ ಅದಕ್ಕೆ. ಏನೆಲ್ಲ ಆಕ್ತದೆ. ಕೊನೆಗೆ ಎಲ್ಲಾ ಕರೆಕ್ಟ್ ಬರ್ತದೆ. ಫಿಟ್ಟರ್ ಬಂದ್ರೆ ಏನ್ ಮಾಡ್ತಾನೆ ಅಂತ್ಹೇಳಿದ್ರೆ, ಅವನು ಯಂತ್ರವನ್ನು ಹಾಕಿ, ಒಳ್ಳೆದದಿದೆಲ್ಲ ಹಾಕಿ, ಅಲ್ಲಿ ಏನುಂಟುಂತ್ಹೇಳಿ ನೋಡ್ತಾನೆ. ಇದು ನಿಜವಾಗಿಯಾದ್ರು ಚೇಂಜ್ ಮಾಡುವಂಥಾದ್ದು ಉಂಟೋ ಅಥವಾ ಇಲ್ಲವೋ ಅಂತ್ಹೇಳಿ ತುಂಬಾ ನೋಡ್ತಾನೆ. ಯಂತ್ರ ಒಳ್ಳೇದುಂಟಪ್ಪಾ ಅಂತ ನಾವು ಹೇಳಿದ್ರೂ ಅವ ಒಪ್ಪೋದಿಲ್ಲ. ಅವ ಅವ ತಿಳೀತಾನೆ ಅದನ್ನ ಅಲ್ಲಿ ಏನು ಸಂಭವಿಸಿದೆ ಒಳಗೆ ಎಂಬುದಾಗಿ, ಹ. ಹ. ಹ.

ಕಾಮತ್ – ಗುರು ಎಂಬ ಫಿಟ್ಟರ್ ಬರಬೆಕೇನೋ.

ಅಜ್ಜ – ಎಂಥಾದ್ದೋ ಏನೋ. ಒಟ್ಟಾರೆ ಕತೆಗಳೆಲ್ಲ ಹೀಗೆ ಉಂಟು. ಏನೋ ಒಂದು ಹೇಳಿ ಬರ್ತಾನೆ, ಕೂತ್ಕೊಳ್ತಾನೆ, ಮಾತಾಡ್ತಾನೆ ಅಂತ್ಹೇಳಿ ಕಾಣ್ತದೆ ಇಲ್ಲಿ ಅಲ್ವಾ. ನಮಗೆ ಗೊತ್ತಾಗೊಲ್ವಾ, ಹ. ಹ. ಹ. ಅಭ್ಯಾಸ ಮಾಡುವವರಿಗೆ ಇರುವಂಥವುಗಳು ಪ್ರತಿಯೊಂದು ಮಾತುಗಳು. ಅಭ್ಯಾಸ ಮಾಡುವವರಿಗೆ ಇರುವಂಥವುಗಳು. ನಿಮಗೇನು ಅಭ್ಯಾಸ ಬೇಡಪ್ಪ. ಇದ್ದಲ್ಲಿ ನೋಡುವ ಏನಾಕ್ತೀರಿ ಅಂತ್ಹೇಳಿ, ಮುದೆ ಏನಾಕ್ತದೆ ನೋಡುವ ಮುಂದೆ, ಅಲ್ವಾ. ತನ್ನಿಂದ ತಾನೆ ಆಗುವಂಥಹ ಕೆಲವು ವಿಚಾರಗಳುಂಟು. ಜನರಿಗೆ ಅದು ಗೊತ್ತುಪಡಿಸ್ಬೇಕಾದ್ರೆ ನಾವು ಕೆಲಸ ಮಾಡಬೇಕು ಅಲ್ವಾ.

D. R.

ಕರ್ಮ ಕರ್ತವ್ಯ ಮಾಡಬೇಕು, ಏನ್ಮಾಡ್ಬೇಕು.

ಕಾಮತ್ – ಸಾಧನೆ ಅಗತ್ಯ ಇಲ್ವಾ ಅದಕ್ಕೆ.

ಅಜ್ಜ – ಅದಕ್ಕೆಂತದು ಸಾಧನೆ.

ಕಾಮತ್ – ಇದರಲ್ಲಿ ಮಾಡುವ ರೀತಿಯಲ್ಲಿ ಈ ಸಾಧನೆ ಅದಕ್ಕೆ ಅಗತ್ಯ ಇಲ್ಲ.

ಅಜ್ಜ – ಹೌದು, ಹೌದು. ಅಲ್ಲಿ ಕರ್ತವ್ಯವನ್ನು ಮಾಡ್ಬೇಕು. ಆಮೇಲೆ ಅದು ತನ್ನಿಂದ ತಾನೆ ಆಕ್ತದೆ ಕರ್ತವ್ಯ. ಅದು ಕರ್ಮವಲ್ಲ. ಇದು ಕರ್ಮ ನೋಡಿ. ಅದು ಕರ್ತವ್ಯ. ಈಗ ಭೂತಕನ್ನಡಿಯಲ್ಲಿ ಬೆಂಕಿ ಇಲ್ಲ. ಆದರೆ ಯಾವುದರಿಂದ ಅದಕ್ಕೆ ಬೆಂಕಿ ಬರಿಸ್ಲಿಕ್ಕೆ ಸಾಧ್ಯ ಆಕ್ತದೆ.

ಕಾಮತ್ – ಸೂರ್ಯನ ಪ್ರಕಾಶದಿಂದ.

ಅಜ್ಜ – ಅದನ್ನು ಇದನ್ನ ಮಾಡಿಕೊಂಡೆ ಅಂದ್ರೆ ಭೂತಕನ್ನಡಿ. ಅದೆಂತ ಕನ್ನಡಿಯಪ್ಪ ಅದು.

ಕಾಮತ್ – ಭೂತಕನ್ನಡಿ.

ಅಜ್ಜ – ಹೀಗುಂಟು. ಹಾಗಾದ್ರೆ ಸೂರ್ಯನ ಪ್ರಕಾಶ ಇಡೀ ವಿಶ್ವದಲ್ಲಿ ಹರಡಿಕೊಂಡಿಲ್ವಾ. ಅಲ್ಲೆಲ್ಲ ಯಾಕೆ ಬೆಂಕಿ ಬೀಳಲಿಲ್ಲ. ಇಲ್ಲಿ ಮಾತ್ರ ಬಿತ್ತು ಯಾಕೆ. ಆಗ ನೀವು ಕೇಳಿದ ಪ್ರಶ್ನೆಗೆ ಇದು ಉತ್ತರ. ಇಡೀ ವಿಶ್ವದಲ್ಲಿರುವದು ಅಲ್ಲಿ ಯಾಕೆ ಗೊತ್ತಾಗೋದಿಲ್ಲಾಂತ್ಹೇಳಿ. ಹಾಗಾದ್ರೆ ಅಲ್ಲಿ ಸ್ವಲ್ಪ ಕೆಲಸ ಮಾಡ್ಬೇಕು. ಮಾತು ಒಳ್ಳೆ ಒಳ್ಳೇ ಮಾತು ಬರ್ತದೆ ಅಲ್ವಾ, ಅಲ್ಲಿ.

ಕಾಮತ್ – ಬರ್ಲೇ ಬೇಕಲ್ಲಾ.

ಅಜ್ಜ – ಹಾಂ. ಇವೆಲ್ಲ ಆಲೋಚನೆ ಇಲ್ಲದೆ ಬರುವಂಥಾ ವಿಚಾರಗಳು. ಟಿಕೇಟ್ ಬೇಕು. ಟಿಕೇಟ್ ಪಡೆಯದೆ ಇದಾಗೋದಿಲ್ಲ. ಗಂಟೆ ಎಷ್ಟಾಯಿತು ಇವಾಗ.

ಕಾಮತ್ – ೪–೩೦ ಆಯ್ತು.

* ಓಂ ಶಿವ ಶಂಕರ ಓಂ ಶಿವ ಶಂಕರ ಓಂಕಾರ
ಓಂ ಶಿವ ಶಂಕರ ಓಂ ಶಿವ ಶಂಕರ ಓಂ ಶಿವ ಶಂಕರ ಓಂಕಾರ
ಓಂ ಶಿವ ಶಂಕರ ಓಂ ಶಿವ ಶಂಕರ ಓಂ ಶಿವ ಶಂಕರ ಓಂಕಾರ
ಓಂಕಾರಾSSSS ಓಂಕಾರ ಓಂಕಾರೋಂಕಾರೋಂಕಾರ
ಓಂ ಶಿವ ಶಂಕರ ಓಂ ಶಿವ ಶಂಕರ ಓಂ ಶಿವ ಶಂಕರ ಓಂಕಾರ

* ಶ್ರೀ ರಾಮ ಬೇರೆಯಲ್ಲ ಹರೆ ರಾಮ ಬೇರೆಯಲ್ಲ
ಹರೆ ರಾಮ ಬೇರೆಯಲ್ಲ ಶ್ರೀ ರಾಮ ಬೇರೆಯಲ್ಲ ಓಂ ಶಿವ ಶಂಕರ
ಓಂ ಶಿವ ಶಂಕರ ಓಂ ಶಿವ ಶಂಕರ ಓಂ ಶಿವ ಶಂಕರ ಓಂಕಾರ
ಶ್ರೀ ರಾಮ ಜಯರಾಮ್, ಜಯಜಯ ರಾಮ್, ಓಂ ಶ್ರೀ ರಾಮ ಜಯ ರಾಮ
ಜಯ ಜಯ ರಾಮ್ ಓಂ ಶ್ರೀರಾಮ ಜಯ ರಾಮ ಜಯ ಜಯ ರಾಮ ಜಯ
ಶ್ರೀ ರಾಮ ಜಯ ರಾಮ ಜಯ ಜಯ ರಾಮ್ ಓಂ ಶ್ರೀ ರಾಮ ಜಯ
ರಾಮ ಜಯ ಜಯ ರಾಮ್SSS ಜಯ ಜಯ ಜಯ ರಾಮ್ ಓಂ ಶ್ರೀ ರಾಮ
ಜಯ ರಾಮ ಜಯ ಜಯ ರಾಮ್ ಓಂ ಶ್ರೀ ರಾಮ ಜಯ ರಾಮ ಜಯ ಜಯ
ರಾಮ್ – – – (ಮುಂದುವರೆದಿದೆ) – – – ಓಂ ಶ್ರೀ ರಾಮ್ ಜಯ ರಾಮ್
ಜಯ ಜಯ ರಾಮ್ ಓಂ – – – (ಮುಂದುವರೆದಿದೆ) – – –

* ಹರೇ ರಾಮನು ಆನಂದ ಸ್ವರೂಪದ ಮೂಲ ಸ್ವರೂಪ. ಶ್ರೀ ರಾಮನು ಆನಂದ ಸ್ವರೂಪವೇ ಆಗಿರುವನು.

ಹರೆ ರಾಮ ಬೇರೆಯಲ್ಲ ಶ್ರೀ ರಾಮ ಬೇರೆಯಲ್ಲ
ಶ್ರೀ ರಾಮ ಬೇರೆಯಲ್ಲ ಹರೆ ರಾಮ ಬೇರೆಯಲ್ಲ – – – (ಹೀಗೆ ಮುಂದುವರೆದಿದೆ)

ಶ್ರೀ ಹರಿಯ ಪಾದಾರವಿಂದದಲ್ಲಿ ಕುಣಿಯುವ
ಶ್ರೀ ಹರಿಯ ಪಾದಾರವಿಂದದಲ್ಲಿ ನಲಿಯುವ
ಶ್ರೀ ಹರಿಯ ಪಾದಾರವಿಂದದಲ್ಲಿ ಕುಣಿಯುವ
ಶ್ರೀ ಹರಿಯ ಪಾದಾರವಿಂದದಲ್ಲಿ ನಲಿಯುವ ಪರಮ ಭಾಗ್ಯವೂsss – – –

ನಮಗೆಲ್ಲ ಲಭಿಸಲಿ ಅಂತ್ಹೇಳಿ ನಿಮ್ಮೆಲ್ಲರ ಪರವಾಗಿ ನಾವು ಆ ಪರಮಾತ್ಮನಲ್ಲಿ ಸದಾ ಕಾಲವೂ ಪ್ರಾರ್ಥನೆ ಮಾಡಿಕೊಳ್ತಾ ಇದ್ದೇವೆ. ಅಂಥಾ ಭಾಗ್ಯವು ನಮಗೆಲ್ರಿಗೂ ಒದಗಲೀ ಅಂತ್ಹೇಳಿ ನಾವು ಎಲ್ರೂ ಒಟ್ಟಿದ್ದು ಕೇಳಿಕೊಳ್ಳುವ.

ಶ್ರೀ ರಾಮ ಜಯ ರಾಮ ಜಯ ಜಯ ರಾಮ್ ಓಂ – – – (ಮುಂದುವರೆದಿದೆ)

ಓಂ ಶಿವ ಶಂಕರ ಓಂ ಶಿವ ಶಂಕರ ಓಂ ಶಿವ ಶಂಕರ ಓಂಕಾರ – – –
ಶಂಕರ ಶಂಕರ ಶಂಕರ ಶಂಕರ
ಶಂಕರ ನಿನ್ನಯ ಕಿಂಕರನಾದ ಶಂಕರಾ ಶಂಕರಾ
ಶಂಕರಿ ನಿನ್ನಯ ಕಿಂಕರನಾದ ಶಂಕರೀ ಶಂಕರೀ
ತಾಯೇ ನಿನಗೆ ವಂದಿಪೆ ಅಂಬಿಕೆ ತ್ರಯಂಬಿಕೆ ಮೂಕಾಂಬಿಕೆ
ತಾಯೇ ನಿನಗೆ ವಂದಿಪೆ ತಾಯೇ ನಿನಗೆ ವಂದಿಪೆ

ಮೂರು ದಿನದ ಬಾಳ್ವಿಗಾಗಿ ಆತ್ಮ ಸುಖವಾ ಮರೆತುಬಿಟ್ಟು
ವಿಷಯ ಸುಖಕೆ ಮರುಳಾಗಿ ಕಷ್ಟಪಟ್ಟು ದುಃಖಪಡುವ
ವಿಷಯ ಸುಖವು ಬೇಡ ನಮಗೆ
ಆರು ದಿನದ ಬಾಳ್ವಿಗಾಗಿ ವಿಷಯ ಸುಖವಾ ಮರೆತುಬಿಟ್ಟು
ಆತ್ಮಸುಖಕೆ ಮರುಳಾಗಿ ಕಷ್ಟಪಟ್ಟು ಸುಖವ ಪಡುವ
ಆತ್ಮಸುಖವೇ ಸಾಕು ನಮಗೆ
ಮೂರುದಿನದ ಬಾಳ್ವಿಗಾಗಿ ವಿಷಯ ಸುಖವು ಬೇಡ ನಮಗೆ.

ವಿಷಯ ಸುಖವು ಸುಖವು ಅಲ್ಲ, ವಿಷಯ ಸುಖದಿ ಸುಖವು ಇಲ್ಲ
ಇಂದ್ರಿಯ ಸುಖವು ಸುಖವು ಅಲ್ಲ, ಇಂದ್ರಿಯ ಸುಖದಿ ಸುಖವು ಇಲ್ಲ
ಆತ್ಮ ಸುಖವೇ ಸುಖವು ನೋಡು, ಆತ್ಮ ಸುಖದಿ ಸುಖವು ಉಂಟು
ಮೂರು ದಿನದ ಬಾಳ್ವಿಗಾಗಿ ವಿಷಯ ಸುಖವು ಬೇಡ ನಮಗೆ
ಆರು ದಿನದ ಬಾಳ್ವಿಗಾಗಿ ಆತ್ಮ ಸುಖವೇ ಸಾಕು ನಮಗೆ – – –

ಶ್ರೀ ರಾಮಚಂದ್ರನ ವರ ಪ್ರಸಾದದಿಂ ಜನಿಸಿದ
ಈ ರಾಮಚಂದ್ರನೆಂಬ ದೇಹದೊಳಿರ್ಪ ನಾನು
ಶ್ರೀ ರಾಮಚಂದ್ರನ ವರ ಪ್ರಸಾದದಿಂ ಜನಿಸಿದ
ಈ ರಾಮಚಂದ್ರನೆಂಬ ದೇಹದೊಳಿರ್ಪ ನಾನು
ಶ್ರೀ ರಾಮನಿಂದ ಕಿರುವಚನವಂ ಪಡೆಯಲು
ಕೈ ಮುಗಿದು ಮನ ಬಾಗಿ ಬೆಸಗೊಂಬೆನು

ಶ್ರೀ ಹರಿಯ ಪಾದಾರವಿಂದದಲ್ಲಿ ಕುಣಿಯುವ
ಶ್ರೀ ಹರಿಯ ಪಾದಾರವಿಂದದಲ್ಲಿ ಕುಣಿಯುವ
ಶ್ರೀ ಹರಿಯ ಪಾದಾರವಿಂದದಲ್ಲಿ ನಲಿಯುವ
ಶ್ರೀ ಹರಿಯ ಪಾದಾರವಿಂದವನು ಸೇರುವ
ಪರಮ ಭಾಗ್ಯವು ನಮಗೆ ಲಭಿಸಲಿ ಎಂಬಾ – – – ಆ್ಞಂ, ಹ. ಹ. ಹ.
ಆಶೀರ್ವಚನವನು ಕೊಡುವೆನು – – –
ಕೃಷ್ಣ ನಿನ್ನ ಸ್ಮರಣೆಯೊಂದೆ ಎನಗೆ ಅದುವೆ ಆನಂದಂ
ಆನಂದಂ ಆನಂದಂ ಆನಂದಾನಂದಾನಂದಂ ಆನಂದಂ

ನಾವು ೩೦ ವರ್ಷಗಳಯಿತು ನಿಮ್ಮ ಊರಿಗೆ ಬಂದು ಅಲ್ವಾ. ನಮ್ಮನ್ನು ನೀವು ವಿಚಾರಿಸಿದ್ದೀರಿ ಅಲ್ವಾ, ಆ್ಞಂ.

ಕಾಮತ್ – ಸ್ವಲ್ಪ ಸಲ್ಪ (R. D.)

ಅಜ್ಜ – ನಿಮ್ಮ ಕೈಯಲ್ಲಿ ಸಿಕ್ಕಿಬಿದ್ದಿದ್ದೇವೆ ಗ್ಯಾರಂಟಿ. ಈ ಪ್ರಪಂಚಕ್ಕೆ ನಾವು ಜನ್ಮಕ್ಕೆ ಬಂದು ಪ್ರಪಂಚದಲ್ಲಿ ನಾವು ನಿಮ್ಮ ಕೈಯಿಗೆ ಸಿಕ್ಕಿದ್ದೇವೆ. ಇದರಲ್ಲೇನು ಅನುಮಾನ ಇಲ್ಲ. ನಾವು ಬಂದಾಯ್ತಿಲ್ವಾ. ಈ ನಿಮ್ಮ ಅಧೀನ ನಮ್ಮನ್ನು ಬಿಡ್ತೀರೋ ಇಲ್ಲಾದ್ರೆ,

ಕಾಮಟ್ – ಈಗ ಬಂದವ ಯಾರು ಹೇಳಿ.

ಅಜ್ಜ – ಈಗ ತಂದೆ ತಾಯಿಯ ಗರ್ಭದಿಂದ ಬಂದದ್ದಲ್ಲಾ ಅಂತ ಹೇಳ್ವಾಗ ನಮ್ಮನ್ನು ನೀವು ಬಿಡ್ತೀರ.

ಕಾಮತ್ – ಅದು ಯಾರು ಬಂದದ್ದು.

ಅಜ್ಜ – ಅದೇ ಸಾಕ್ಷಾತ್ಕಾರ ಈಗ ಇರೋದು. ಅಲ್ಲ, ಇದು ನಮ್ಮ ಸ್ವಾಗತ ಭಾಷಣಗಳಿಗೆ ಒಳಪಟ್ಟದ್ದು ಯಾವುದು. ಈ ಮಾತಾಡಿದಂಥಾ ಮಾತು ನಮ್ಮ ಸ್ವಾಗತ ಭಾಷಣ.

ಕಾಮತ್ – ಇನ್ನು ವಿಷಯವನ್ನು ಮಾತಾಡ್ಲಿಕ್ಕೆ ಬೇರೆಯೇ ಉಂಟು.

ಅಜ್ಜ – ನಿಮ್ಮ ಪ್ರಶ್ನೆ ಕೇಳ್ಲಿಕ್ಕೆ ಇಲ್ಲಿ ಉತ್ತರ ಬರೋಲ್ಲ. ಇದು ಸ್ವಾಗತ ಭಾಷಣ. ಒಂದು ಸಭೆಯಲ್ಲಿ ಸ್ವಾಗತ ಭಾಷಣ ಅಂತ್ಹೇಳಿ ಉಂಟಲ್ಲ. ಹಾಗೆ ಯಾಕೆ ಬಂದದ್ದು? ಏನು ? ಎಂಬುದು ಪ್ರಶ್ನೆ. ಅದು ಅಲಾಯಿದೆ. ಇದು ಸ್ವಾಗತ ಭಾಷಣದಲ್ಲಿ ಬಂದದ್ದು. ಯಾಕೆ ಬಂದದ್ದು ಅಂತ ಕೇಳುವಾಗ ಅಲ್ಲಿ ಹೇಳ್ಲಿಕ್ಕೆ ಬರ್ತದೆ. ನೋಡೀ, ಕರ್ಮಫಲವನ್ನು ಅನುಭವಿಸ್ಲಿಕ್ಕೋಸ್ಕರ ಬಂದದ್ದು ಅಂತ್ಹೇಳ್ತದೆ. ಆಗಾಗ ಗ್ರಹಿಸ್ಬೇಕು ಅಲ್ಲಿ. ಹಿಂದೆ ಜನ್ಮ ಉಂಟೂ ಅಂತ್ಹೇಳಿ. ಕರ್ಮ ಮಾಡಿದ ಅದನ್ನು ಅನುಭವಿಸ್ಲಿಕ್ಕೆ ಬಂದ ಕರ್ಮ ಯಾವಾಗ ಮಾಡಿದ್ದು ? ಈ ಜನ್ಮದಲ್ಲಿಯೋ ಹಿಂದಿನ ಜನ್ಮದಲ್ಲಿಯೋ ಅಂತ್ಹೇಳಿ. ಯಾಕೆ ಬಂದದ್ದೂ ಅಂತ್ಹೇಳಿ. ಜನ್ಮ ಯಾಕೆ ಬಂತು ಒಬ್ಬನಿಗೆ.

ಕಾಮತ್ – ಕಮ್ಮಿ ಸುಖ ಅನುಭವಿಸ್ಲಿಕ್ಕೆ.

ಅಜ್ಜ – ಅಂದ್ರೆ ಹಿಂದಿನ ಜನ್ಮಕ್ಕೆ ಹೋಕ್ತದೆ. ಅಲ್ಲಿ ಮಾಡಿದ ಕರ್ಮವನ್ನು ಅನುಭವಿಸ್ಲಿಕ್ಕಾಗಿ ಬಂದದ್ದು. ಇಲ್ಲಿ ಕರ್ಮ ಮಾಡೋದು ಯಾಕೆ. ಮುಂದಿನ ಜನ್ಮಕ್ಕೆ ಬೇಕಾಗಿ. ನಮ್ಗೆ ಇಲ್ಲಿ ಕರ್ಮ ಏನೂ ಕಾಣೋದಿಲ್ಲ. ಆದ್ರೆ ನಾವು ತಿರುಗಾಡ್ತಾ ಇದ್ದೇವೆ. ಹಾಗಾದ್ರೆ ಹಿಂದೆ ಇತ್ತು ಎಂಬುದು ಸ್ಪಷ್ಟ ಆಯ್ತು. ಅದನ್ನು ಅನುಭವಿಸುವಂಥಾದ್ದು ನಾವು ಇಲ್ಲಿ. ಅನುಭವಿಸುವಾಗ ಜೊತೆಯಲ್ಲಿ ಹಿಂದೆ ಏನಾದ್ರು ಬಾಕಿ ಸಿಲ್ಕುಗಳಿದ್ರೆ ಅದನ್ನು ಇದರೊಟ್ಟಿಗೆ ಮಾಡಿಬಿಡೋದು ಅಷ್ಟೇ. ಅದಕ್ಕೋಸ್ಕರ ಬಂದದ್ದಲ್ಲ. ಅನುಭವಿಸ್ಲಿಕ್ಕೆ ಬಂದದ್ದು ಎಂಬುದು ನಿಶ್ಚಯ. ಈ ಅನುಭವಿಸುವಾಗ ಹಿಂದೆ ಬಾಕಿ ಇದ್ದದ್ದನ್ನು, ಇದ್ರೆ ಅದನ್ನು ಕಂಪ್ಲೀಟ್ ಮಾಡಿ ಬಿಡೋದು. ಇದು ಮಾಡ್ಲಿಕ್ಕೆ ಬಂದದ್ದಲ್ಲ. ಬಂದದ್ದು ಅದಕ್ಕೆ. ಇದಕ್ಕಾಗಿಯೇ ಬಂದಿದೆ. ತಂದೆ ತಾಯಿಯ ಗರ್ಭದ ಮೂಲಕ ಬರ್ಬೇಕಿತ್ತು ಅದಲ್ಲಾ ಅಂತ್ಹೇಳಿ ಹೇಳ್ತವೆ. ಅರ್ಥಾಗ್ಲಿಲ್ವಾ, ಆ್ಞಂ. ನಿಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಿ, ಮಥನ ಮಾಡಿ ಹ್ಞಾಂ. ಹಾಗಾದ್ರೆ ಹಿಂದೆ ಜನ್ಮ ನಮಗೆ ಇತ್ತು ಅಂತ್ಹೇಳಿ ಆಯ್ತು. ಇದು ನಾವು ಹೇಳುವಂಥಾದ್ದಲ್ಲ ಅಂತ್ಹೇಳಿ. ನಮ್ಮ ಹಿಂದೂ ಧರ್ಮಶಾಸ್ತ್ರದಲ್ಲಿ ಹೇಳ್ತದೆ ಅಂತ್ಹೇಳಿ ನೀವು ಹೇಳಿದ್ರಿ, ಅಲ್ವಾ. ಹಾಗಾದ್ರೆ ನಮ್ದು ಹೊಸದೇನಲ್ಲಲ್ವಾ ಇದು.

ಕಾಮತ್ – ಇಲ್ಲ.

ಅಜ್ಜ – ನಮ್ಮದು ಹೊಸ್ದು.

ಕಾಮತ್ – ಅಲ್ಲ.

ಅಜ್ಜ – ಆ ರೀತಿ ಜನ್ಮ ಉಂಟೋ ಅಂತ್ಹೇಳಿ ತಿಳೀರಿ ನೀವು. ಆಮೇಲೆ ಉಂಟು ಅಂತ್ಹೇಳಿ ಆದ್ರೆ ನಾವು ಮತ್ತೆ ಮಾತಾಡ್ತೇವೆ. ನಿಮ್ಮ ಎದುರಿಗೆ ನಾವು ಸಿಕ್ತೇವೆ.

ಕಾಮತ್ – ಆ ರೀತಿ ಜನ್ಮ ಇಲ್ಲ. ಆದ್ರೆ ಈ ರೀತಿ ಜನನಕ್ಕೆ ಬಂದ ಕಾರಣ ಏನು ?

ಅಜ್ಜ – ಇಲ್ಲಾಂತ್ಹೇಳಿ. ಆದ್ರೆ ಇದು ಹೊಸದು. ಇದು ಯಥಾರ್ಥ. ಅಲ್ಲಂತ್ಹೇಳಿ ಆಯ್ತ ಹಾಗಾದ್ರೆ. ಹಾಗೆ ಪ್ರಪಂಚದಲ್ಲಿ ಹೊಸ್ದು ಯಾವ್ದೂ ಇಲ್ಲ. ಅಂದ್ರೆ ಉಂಟೋ ಅಂತ್ಹೇಳಿ ನಮಗೆ ನೋಡಬೇಕಾದ್ದೀಗ.

ಕಾಮತ್ – ಆ ರೀತಿಯಾದ್ದು ಶಾಸ್ತ್ರದಲ್ಲಿ ಯಾವುದೂ ಇಲ್ಲ. ಹಾಗಾಗಿ ಇದೊಂದು ಹೊಸದು. ಹೊಸ ರೀತಿಯಲ್ಲಿ ಬರ್ಲಿಕ್ಕೆ ಕಾರಣ ಏನೂಂತ.

ಅಜ್ಜ – ಅದು ಹೊಸದು ಅಂತ್ಹೇಳಿ ಆದ್ರೆ ಅದನ್ನು ಬಿಟ್ಟುಬಿಡಬೇಕು. ಅದನ್ನು ನೋಡಿ ಆಯ್ತೋ ಈಗ ಇಲ್ಲಿ. ನೋಡಿ ಆಗ್ಲಿಲ್ಲ. ನೋಡ್ಲಿಕ್ಕುಂಟೇ ಅಂಥದ್ದೊಂದು ಉಂಟೋ ಅಂತ್ಹೇಳಿ ನೋಡ್ಲಿಕ್ಕುಂಟು.

ಕಾಮತ್ – ಅಂಥದ್ದೊಂದು ವಿಷಯ ಉಂಟು.

ಅಜ್ಜ – ನಮಗೀ ಪ್ರಪಂಚ ಸ್ಥಿರವೂ ಅಲ್ಲ. ಸ್ಥಿರವಾಗಿದ್ದಿದ್ರೆ ನಾವು ಸ್ವಲ್ಪ ಭಯಪಡಬೇಕಿತ್ತು. ಯಾಕೆ. ಮುಂದೆ ಕೂಡ ನಾವು ಉಳೀಬೇಕು ಹೀಗೇಂತ್ಹೇಳಿ. ಅದಲ್ಲವಾದ್ರೆ ನಮಗೆ ಭಯ ಯಾಕೆ ಹೇಳಿ ಅಲ್ವಾ. ನಾವು ನಮಗಾಗಿ ನಾವು ಬಂದಿಲ್ಲ ಎಂಬುದು ಸಿದ್ಧಾಂತ. ನಮಗಾಗಿ ನಾವು ಬಂದಿದ್ರೆ ತಂದೆ ತಾಯಿಯ ಗರ್ಭದ ಮೂಲಕವೇ ಬರ್ಬೇಕಿತ್ತು. ಹಾಗಾದ್ರೆ ನಾವು ಯಾಕೆ ಬಂದದ್ದು ?

*****